**ಮೈಸೂರಿನ ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**

**<u>ಎಸ್.ಸಿ.ಸಂಖ್ಯೆ 113/2023</u>**

ಫಿರ್ಯಾದುದಾರರು : ರಾಜ್ಯ ಸರ್ಕಾರದ ಪರವಾಗಿ ವರುಣಾ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : ನಂಜೇಗೌಡ ಮತ್ತು ಇತರರು

**: <u>ದೋಷರೋಪಣೆ</u> :**

ನಾನು ಶ್ರೀ ಮಲ್ಲನಗೌಡ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿಯಾದ :-

1. ನಂಜೇಗೌಡ ಬಿನ್ ಲೇಟ್ ಮಾದೇಗೌಡ ಉರುಫ್ ಕೂಸಪ್ಪನ ಮಾದೇಗೌಡ, 40 ವರ್ಷ,
2. ಮಹದೇವ ಬಿನ್ ಲೇಟ್ ಮಾದೇಗೌಡ ಉರುಫ್ ಕೂಸಪ್ಪನ ಮಾದೇಗೌಡ, 56 ವರ್ಷ,
3. ಮಹದೇವ .ಎಂ. ಬಿನ್ ಮರೀಗೌಡ ಉರುಫ್ ಮರಿಯಪ್ಪ ಉರುಫ್ ಬೋಜಪ್ಪ , 45 ವರ್ಷ

ಎಲ್ಲರ ವಾಸ ಬಡಗಲಹುಂಡಿ ಗ್ರಾಮ, ವರುಣಾ ಹೋಬಳಿ, ಮೈಸೂರು ತಾಲ್ಲೂಕು.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಮೈಸೂರು ಗ್ರಾಮಾಂತರ ವೃತ್ತಕ್ಕೆ ಸೇರಿದ ವರುಣಾ ಪೊಲೀಸ್ ಠಾಣಾ ಸರಹದ್ದು, ಬಡಗಲಹುಂಡಿ ಗ್ರಾಮದ ಸಾಕ್ಷಿ.3 ಮಾದಮ್ಮ ಮತ್ತು ಲೇಟ್.ಮಾದೇಗೌಡ ಇವರ 3 ನೇ ಮಗಳಾದ ಸಾಕಮ್ಮರವರನ್ನು ಈಗ್ಗೆ ಸುಮಾರು 20 ವರ್ಷಗಳ ಹಿಂದೆ ಮೈಸೂರು ಕುರುಬರಹಳ್ಳಿಯ ಜವರೇಗೌಡರಿಗೆ ಮದುವೆ ಮಾಡಿ ಮದುವೆಯಾದ ನಂತರ 1-2 ವರ್ಷ

ಮಾತ್ರ ಸಾಕಮ್ಮ ಗಂಡನ ಮನೆಯಲ್ಲಿದ್ದು, ನಂತರ ಗಂಡ ಮತ್ತು ತಮ್ಮ ಮಗ ರವಿಕುಮಾರನೊಂದಿಗೆ ಬಡಗಲಹುಂಡಿ ಗ್ರಾಮಕ್ಕೆ ಬಂದು ವಾಸವಾಗಿದ್ದು, ಸಾಕಮ್ಮರವರಿಗೆ ಇವರ ತಂದೆ ಮಾದೇಗೌಡರು ಬದುಕಿದ್ದಾಗಲೇ ಬಡಗಲಹುಂಡಿ ಗ್ರಾಮದಲ್ಲಿ ಕೆಂಪೇಗೌಡನಹುಂಡಿಯ ಕೆಂಪೇಗೌಡರಿಂದ ಖರೀದಿಸಿದ್ದ ವರಕೋಡು ಸ.ನಂ.288-7 ರಲ್ಲಿನ 9 ಮುಕ್ಕಾಲು ಗುಂಟೆ ಜಮೀನಿನಲ್ಲಿ ಸಾಕಮ್ಮನಿಗೆ ಎರಡು ಗುಂಟೆ ಜಾಗವನ್ನು ಕೊಟ್ಟು ಮನೆ ಕಟ್ಟಿ ಕೊಟ್ಟಿರುವುದಾಗಿ, ಉಳಿದ 7 ವರೆ ಗುಂಟೆಯಲ್ಲಿ ಗಂಡು ಮಕ್ಕಳಾದ 1 ಮತ್ತು 2 ನೇ ಆರೋಪಿಗಳಾದ ನಿಮಗೆ ಅರ್ಧ - ಅರ್ಧ ಜಮೀನು ಹಂಚಿಕೊಟ್ಟಿರುವುದಾಗಿ, ಅಲ್ಲದೇ ಮಾದೇಗೌಡರು ಬದುಕಿದ್ದಾಗಲೇ ಬಡಗಲಹುಂಡಿ ಗ್ರಾಮದಲ್ಲಿರುವ ಇವರ ಬಾಬ್ತು ವರಕೋಡು ಸ.ನಂ.459-3 ರಲ್ಲಿ 17 ಗುಂಟೆ ಜಮೀನು ಮತ್ತು ವರಕೋಡು ಕಲ್ಯಾಣಿ ಬಳಿ ಇರುವ ವರಕೊಂಡು ಸ.ನಂ.266-4 ರಲ್ಲಿ 24 ಗುಂಟೆ ಜಮೀನನ್ನು 1 ಮತ್ತು 2 ನೇ ಆರೋಪಿಗಳಾದ ನಿಮಗೆ ಸಮನಾಗಿ ಹಂಚಿಕೊಟ್ಟು ಆರೋಪಿಗಳಾದ ನೀವುಗಳು ಸ್ವಾಧೀನಾನುಭವದಲ್ಲಿರುವುದಾಗಿ ಸಾಕಮ್ಮರವರ ಗಂಡ ಜವರೇಗೌಡರು ಈಗ್ಗೆ ಸುಮಾರು 12 ವರ್ಷಗಳ ಹಿಂದೆ ಮತ್ತು ಸುಮಾರು 9 ತಿಂಗಳ ಹಿಂದೆ ಮಗ ರವಿಕುಮಾರರವರು ಮೃತಪಟ್ಟಿದ್ದು, ಇತ್ತೀಚೆಗೆ ಸಾಕಮ್ಮರವರು ನನಗೂ ಸಹ ತಮ್ಮ ತಂದೆಯ ಜಮೀನಿನಲ್ಲಿ ಪಾಲುಬೇಕು ಎಂದು ಕೇಳಿದ ವಿಚಾರದಲ್ಲಿ ಸಾಕಮ್ಮನ ಮೇಲೆ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಗಲಾಟೆ ಮಾಡುತ್ತಿದ್ದು ಸಾಕಮ್ಮನ ಮನೆಯ ಪಕ್ಕ ರಸ್ತೆ ಪಕ್ಕದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವು ಅಂಗಡಿ ಮಳಿಗೆ ಕಟ್ಟುವಷ್ಟು ಜಾಗವಿದ್ದು ಇವರು ಅಂಗಡಿ ಮಳಿಗೆ ಕಟ್ಟುವಷ್ಟು ಜಾಗವಿದ್ದು ಇವರು ಅಂಗಡಿ ಮಳಿಗೆಯನ್ನು ಮಾಡುವ ಉದ್ದೇಶದಿಂದ ಸಾಕಮ್ಮಳಿಗೆ ಸ್ವಲ್ಪ ಹಿಂದಕ್ಕೆ ಹೊಸದಾಗಿ ಮನೆಯನ್ನು ಕಟ್ಟಿಕೊ ಬೇಕಾದಲ್ಲಿ ಈಗಿರುವುದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಜಾಗವನ್ನು ಕೊಡುವುದಾಗಿ ಹೇಳಿದಾಗ ಸಾಕಮ್ಮರವರು ಒಪ್ಪದೇ ದಿನಾಂಕ.21.10.2022 ರಂದು ಮಧ್ಯಾಹ್ನ 1.00 ಗಂಟೆಯಲ್ಲಿ 1 ಮತ್ತು 2 ನೇ ಆರೋಪಿಗಳಾದ ನಿಮಗೆ ಸೇರಿದ ಅಂಗಡಿ ಮಳಿಗೆ ಕಟ್ಟಬೇಕೆಂದುಕೊಂಡಿದ್ದ ಜಾಗದ ಕಡೆಗೆ ಸಾಕಮ್ಮ ತನ್ನ ಮನೆಯ ಗೋಡೆಯನ್ನು ಹೊಡೆಸಿ ಬಾಗಿಲನ್ನು ಇಡಿಸುತ್ತಿದ್ದಾಗ ನೀವುಗಳು ಹಾಗೂ ಇವರ ಕಡೆಯವರು ಗಲಾಟೆ ಮಾಡಿ ಸಾಕಮ್ಮರವರು ಬಾಗಿಲು ಇಡುವುದನ್ನು ತಡೆದಿದ್ದು, ಈ ವಿಚಾರದಲ್ಲಿ ಸಾಕಮ್ಮರವರು 1 ರಿಂದ 3 ನೇ ಆರೋಪಿಗಳು ಮತ್ತು ಇತರರ ವಿರುದ್ಧ ದೂರು

ನೀಡಿ ವರುಣಾ ಪೊಲೀಸ್ ಠಾಣೆಯಲ್ಲಿ ಮೊಕದ್ದಮ್ಮೆ ನಂ.152-2022 ಕಲಂ 143, 147, 504, 354, 114, 448, 327 ಮತ್ತು 324 ಸಹವಾಚಕ 149 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಆದ್ದರಿಂದ ಅಂದರೆ 1 ನೇ ಆರೋಪಿಯು ತಮ್ಮ ತಂದೆ ಬದುಕಿದ್ದಾಗಲೇ ತನಗೆ ಮತ್ತು ತನ್ನ ಅಣ್ಣನಿಗೆ ಜಮೀನನ್ನು ಸಮನಾಗಿ ಹಂಚಿ ಕೊಟ್ಟಿದ್ದು ಸಾಕಮ್ಮನಿಗೂ ಒಂದು ಮನೆಯನ್ನು ಕಟ್ಟಿಸಿಕೊಟ್ಟಿದ್ದು, ಆದರೂ ಸಹ ಸಾಕಮ್ಮ ನಮಗೆ ಸೇರಿದ ಎಲ್ಲಾ ಜಮೀನಿನಲ್ಲಿಯೂ ತನಗೂ ಪಾಲು ಬರಬೇಕೆಂದು ಆಗಾಗ್ಗೆ ತೊಂದರೆ ಕೊಡುತ್ತಿರುವುದಾಗಿ, ತಾನು ಮತ್ತು ತನ್ನ ಅಣ್ಣ ಅಂಗಡಿ ಮಳಿಗೆ ಕಟ್ಟಿಕೊಳ್ಳೋಣ ಅಂತ ಇದ್ದ  ಜಾಗದ ಕಡೆಗೆ ನಿಮ್ಮ ಮಾತು ಕೇಳದೇ ತನ್ನ ಮನೆಯ ಗೋಡೆಯನ್ನು ಹೊಡೆದು ಬಾಗಿಲು ಇಡುತ್ತಿರುವುದಾಗಿ, ಅಲ್ಲದೇ ನೀವು  ಗಲಾಟೆ ಮಾಡಿರುವುದಾಗಿ ನಿಮ್ಮ  ಮೇಲೆ ಪೊಲೀಸ್ ಕಂಪ್ಲೆಂಟ್ ಕೊಟ್ಟು ಕೇಸು ಮಾಡಿಸಿರುವುದಾಗಿ 1 ನೇ ಆರೋಪಿಯಾದ ನೀವು ಸಾಕಮ್ಮನ ಮೇಲೆ ದ್ವೇಷವನ್ನು ಇಟ್ಟುಕೊಂಡು ಹಾಗೂ ಈ ಬಗ್ಗೆ ಮುಖಂಡರಿಂದ ಪಂಚಾಯಿತಿ ಮಾಡಿಸಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರೂ ಸಹ ಸಾಕಮ್ಮ ಬರದೇ ಇದ್ದುದ್ದರಿಂದ ದಿನಾಂಕ.5.11.2022 ರಂದು ಶನಿವಾರ ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಸಾಕಮ್ಮರವರು ಬಡಗಲಹುಂಡಿ ಗ್ರಾಮದಲ್ಲಿ ತನ್ನ ಮನೆಯಲ್ಲಿ ಇದ್ದುದ್ದನ್ನು ಕಂಡು ಸಾಕಮ್ಮನನ್ನು ಮುಗಿಸಿ  ಬಿಡಬೇಕೆಂದು ಯಾರಿಗೂ ತಿಳಿಯದಂತೆ ಸಾಕಮ್ಮರವರ ಮನೆಗೆ ಹೋಗಿ ಪೋಲೀಸ್ ಕಂಪ್ಲೆಂಟ್ ಕೊಟ್ಟಿರುವ ವಿಚಾರವನ್ನು ಪ್ರಶ್ನಿಸಿದಾಗ 1 ನೇ ಆರೋಪಿಗೂ ಹಾಗೂ ಸಾಕಮ್ಮನಿಗೂ  ಮಾತಿಗೆ ಮಾತು ಬೆಳೆದು ಸಾಕಮ್ಮರವರು ಬರೀ ಪೊಲೀಸ್ ಕಂಪ್ಲೆಂಟ್ ಕೊಡುವುದಲ್ಲ ಅಪ್ಪನ ಆಸ್ತಿಯಲ್ಲಿ ಭಾಗಬೇಕೆಂದು ಕೋರ್ಟಿಗೂ  ಸಹ ಕೇಸು ಹಾಕುತ್ತೇನೆ ಎಂದಿದ್ದರಿಂದ 1 ನೇ ಆರೋಪಿಯಾದ ನೀವು ಸಾಕಮ್ಮನನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಸಾಕಮ್ಮರವರ ಕೆನ್ನೆಗೆ ಹೊಡೆದು ಅಲ್ಲೆ ನೀರು ಕಾಯಿಸಲು ಒಲೆಗೆ ಹಾಕಿದ್ದ ಒಂದು ಸೌದೆ ತುಂಡನ್ನು ತೆಗೆದುಕೊಂಡು ಸಾಕಮ್ಮರವರ ತಲೆಗೆ ಎರಡು ಏಟುಗಳನ್ನು ಜೋರಾಗಿ ಹೊಡೆದಾಗ, ಜ್ಞಾನ ತಪ್ಪಿ ಕೆಳಗೆ ಬಿದ್ದಿದ್ದ ಸಾಕಮ್ಮನ ತಲೆಯನ್ನು ಸಾಕಮ್ಮನ ಮನೆಯೊಳಗೆ ಬಿದ್ದಿದ್ದ ಒಂದು ಮರದ ಪೊಲೀನ ಮೇಲೆ ಇಟ್ಟು ಸಾಕಮ್ಮನ ಮನೆಯಲ್ಲಿದ್ದ ಒಂದು ಕಬ್ಬಿಣದ ಹಾರೆಯನ್ನು ತೆಗೆದುಕೊಂಡು ಬಲವಾಗಿ ಸಾಕಮ್ಮರವರ ತಲೆಗೆ ಹೊಡೆದು ಕೊಲೆ ಮಾಡಿದ್ದು, ಆ

ಕಾರಣದಿಂದ 1 ನೇ ಆರೋಪಿಯಾದ ನೀವು ಭಾ.ದಂ.ಸಂ. 302 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನಂತರ ಆ ದಿನ ರಾತ್ರಿ ಸುಮಾರು 10.00 ಗಂಟೆಗೆ ಸಾಕಮ್ಮನನ್ನು ಕೊಲೆ ಮಾಡಿರುವ ವಿಚಾರವನ್ನು 1 ನೇ ಆರೋಪಿಯಾದ ನೀವು 2 ಮತ್ತು 3 ನೇ ಆರೋಪಿಗಳಿಗೆ ತಿಳಿಸಿದಾಗ 2 ಮತ್ತು 3 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಯಾರಿಗೂ ತಿಳಿಯದಂತೆ ಸಾಕಮ್ಮನ ಶವವನ್ನು ಎಲ್ಲಾದರೂ ತೆಗೆದುಕೊಂಡು ಹೋಗಿ ಬಿಸಾಕೋಣ ಎಂದು 1 ನೇ ಆರೋಪಿಯಾದ ನಿಮಗೆ ತಿಳಿಸಿ ಸಾಕಮ್ಮನ ಕೊಲೆಯನ್ನು ಮರೆ ಮಾಚಿ ಸಾಕ್ಷ್ಯಗಳನ್ನು ನಾಶಪಡಿಸುವ ಏಕೋದ್ದೇಶದಿಂದ ಅದೇ ದಿನ ರಾತ್ರಿ 11.00 ಗಂಟೆ ಸಮಯಕ್ಕೆ ಸಾಕಮ್ಮನ ಮನೆಯಿಂದ 1 ನೇ ಆರೋಪಿಯಾದ ನೀವು ಸಾಕಮ್ಮನ ಶವವನ್ನು ಹೊತ್ತುಕೊಂಡು 2 ಮತ್ತು 3 ನೇ ಆರೋಪಿಗಳಾದ ನಿಮ್ಮಗಳ ಜೊತೆ ಸಾಕಮ್ಮನ ಮನೆ ಪಕ್ಕ 1 ಮತ್ತು 2 ನೇ ಆರೋಪಿಗಳ ರಾಗಿ ಫಸಲಿರುವ ಜಮೀನಿನ ಪಕ್ಕದಲ್ಲಿರುವ ವರುಣಾ ನಾಲೆ ಬಳಿಗೆ ಹೋಗಿ ನಾಲೆಗೆ ಬೀಸಾಕಿ ಶವವು ನಾಲೆಯ ನೀರಿಗೆ ಬೀಳದೇ ಗಿಡಗಂಟೆಗಳು ತಡೆದುಕೊಂಡು ನಾಲೆಯ ದಡದಲ್ಲಿಯೇ ಬಿದ್ದಿರುವುದನ್ನು ಮಾರನೇ ದಿನ ದಿನಾಂಕ.6.11.2022 ರಂದು ರಾತ್ರಿ ಸುಮಾರು 8.00 ಗಂಟೆಯಲ್ಲಿ 1 ನೇ ಆರೋಪಿಯಾದ ನೀವು ಕಂಡು 2 ಮತ್ತು 3 ನೇ ಆರೋಪಿಗಳಿಗೆ ತಿಳಿಸಿದಾಗ ಮತ್ತೆ ಮಧ್ಯರಾತ್ರಿ ಸುಮಾರು 12.00 ಗಂಟೆಯಲ್ಲಿ ಮೂರು ಜನ ಆರೋಪಿಗಳು ಒಟ್ಟಾಗಿ ಸಾಕಮ್ಮನ ಶವ ಬಿಸಾಕಿದ್ದ ಸ್ಥಳಕ್ಕೆ ಹೋಗಿ ಹಗ್ಗದ ಸಹಾಯದಿಂದ ಸಾಕಮ್ಮನ ಶವವನ್ನು ಕಟ್ಟಿ ವರುಣಾ ನಾಲೆಯ ನೀರಿಗೆ ತಳ್ಳಿದ್ದು, ಸಾಕಮ್ಮನವರ ಶವವು ವರುಣಾ ನಾಲೆಯ ನೀರಿನಲ್ಲಿ ತೇಲಿಕೊಂಡು ಹೋಗಿ ಚಟ್ನಹಳ್ಳಿ ಪಾಳ್ಯ ಗ್ರಾಮದ ಬಳಿ ವರುಣಾ ನಾಲೆಯ ನೀರಿನಲ್ಲಿ ದಿನಾಂಕ.12.11.2022 ರಂದು ಪೂರ್ತ ಕೊಳೆತು ಊದಿಕೊಂಡು, ಮುಖ ಮತ್ತು ತಲೆಯ ಮಾಂಸವನ್ನೆಲ್ಲಾ ಜಲಚರ ಪ್ರಾಣಿಗಳು, ಇತರ ಪ್ರಾಣಿಗಳು ತಿಂದು ತಲೆ ಬುರುಡೆಯಾಗಿ ಸಾಕಮ್ಮರವರ ಶವವೆಂದು ಯಾರಿಗೂ ಗುರುತು ಸಿಗದ ರೀತಿಯಾಗಿ ಸಿಕ್ಕಿದ್ದು ಈ ಮುಖೇನ ಸಾಕಮ್ಮನನ್ನು ಕೊಲೆ ಮಾಡಿರುವ ಸಾಕ್ಷ್ಯಾ ದಾರಗಳನ್ನು 1 ರಿಂದ 3 ನೇ ಆರೋಪಿಗಳಾದ ನೀವುಗಳು ನಾಶಪಡಿಸಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 201

ಸಹಕಲಂ 34 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 18.06.2025 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು